ದಿನಾಂಕಃ 06.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ಆರ್. ಬಿ ವಕೀಲರಿಂದಃ</u>**

ದಿ.10.03.2015 ರಂದು ನಮ್ಮ ತಂದೆ ವಾದಿಯು ಸಲ್ಲಿಸಿದ ವಾದ ಪತ್ರಕ್ಕೆ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ನಿಜ. ಅದೇ ದಿನದಂದು ನಾನು ಸಹ ನನ್ನ ಪ್ರತಿವಾದ ಪತ್ರ ಸಲ್ಲಿಸಿದ್ದೆ ಎಂದರೆ ನಿಜ. ಸದರಿ ದಿನದಂದು ನಮ್ಮ ತಂದೆ ಪ್ರತಿವಾದ ಪತ್ರವನ್ನು ಸಲ್ಲಿಸಿದ ಸಂಗತಿ ನನಗೆ ಗೊತ್ತಿತ್ತು ಎಂದರೆ ಸಾಕ್ಷಿಯು ನಾನು ಪ್ರತಿವಾದ ಪತ್ರ ಸಲ್ಲಿಸಿದ ಬಗ್ಗೆ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ದಿನದಂದು ನಮ್ಮ ತಂದೆ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿ ಸಿ.ಟಿ.ಎಸ್ ನಂಬರ 3226/ಅ ನೇದ್ದನ್ನು ನನಗೆ ಮೃತ್ಯುಪತ್ರ ಬರೆದುಕೊಟ್ಟಿರುವ ಬಗ್ಗೆ ತಿಳಿಸಿರುವುದಿಲ್ಲ ಎಂಬ ಸಂಗತಿ ನನಗೆ ಗೊತ್ತಿಲ್ಲ. ದಿ.17.10.2016 ರಂದು ನಾನು ಮತ್ತು ನನ್ನ ತಂದೆ ಪುನಃ ಪ್ರತಿವಾದ ಪತ್ರ ಸಲ್ಲಿಸಿದ್ದೇವು ಎಂದರೆ ಸಾಕ್ಷಿಯು ಬಹಳ ದಿನಗಳಾಗಿದ್ದರಿಂದ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಿ.19.09.2016 ರಂದು ವಿವಾದಿತ ಮೃತ್ಯುಪತ್ರ ವನ್ನು ಸೃಷ್ಟಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ಬಾರಿಗೆ ಪ್ರತಿವಾದ ಪತ್ರವನ್ನು ಸಲ್ಲಿಸುವ ಪ್ರಸಂಗ ಏಕೆ ಉಂಟಾಯಿತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಮುಂಚೆ ನಮ್ಮ ಪರವಾಗಿ ನಿಯೋಜಿಸಿಕೊಂಡ ವಕೀಲರು ತೀರಿಕೊಂಡಿದ್ದರಿಂದ ಹೊಸದಾಗಿ ವಕೀಲರನ್ನು ನೇಮಿಸಿಕೊಂಡು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನಮ್ಮ ಪರವಾಗಿ ವಕಾಲತ್ತು ವಹಿಸಿದ್ದ ಸಿ. ಎಮ್ . ಕಲ್ಯಾಣಶೆಟ್ಟಿ ವಕೀಲರು ದಿ.10.03.2015 ರಂದು ಪ್ರತಿವಾದ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ಸಂಗತಿ ಗೊತ್ತಿತ್ತು ಎಂದರೆ ಸಾಕ್ಷಿಯು ನನ್ನ ಪರವಾಗಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ಮಾತ್ರ ನನಗೆ ಗೊತ್ತಿತ್ತು ಆದರೆ ನನ್ನ ತಂದೆ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರೋ ಅಥವಾ ಇಲ್ಲವೊ

ಎಂದು ನನಗೆ ಗೊತ್ತಿರಲಿಲ್ಲ. ನನ್ನ ಹಾಗೂ ನನ್ನ ತಂದೆಯನ್ನು ಒಬ್ಬರೇ ವಕಿಲರು ಪ್ರತಿನಿಧಿಸುತ್ತಿದ್ದರು ಎಂದರೆ ನಿಜ. ಸದರಿ ಮೇಲೆ ಹೇಳಿದ ನಮ್ಮ ವಕೀಲರಾದ ಶ್ರೀ. ಸಿ. ಎಮ್ ಕಲ್ಯಾಣಶೆಟ್ಟಿ ವಕೀಲರು ನಮ್ಮ ಪರವಾಗಿ ಪ್ರಸ್ತುತ ಪ್ರಕರಣದಲ್ಲಿ ಏನು ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು 2 ನೇ ಬಾರಿ ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಮೊದಲ ಬಾರಿಗೆ ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳು ಹಾಗೂ 2 ನೇ ಬಾರಿ ಸಲ್ಲಿಸಿದ ಪ್ರತಿವಾದ ಪತ್ರದ ಸಂಗತಿಗಳು ಸಂಪೂರ್ಣವಾಗಿ ಬೇರೆ ಇರುತ್ತವೆ ಎಂದರೆ ಸಾಕ್ಷಿಯು ಮೊದಲ ಬಾರಿಗೆ ಸಲ್ಲಿಸಿದ ಪ್ರತಿವಾದ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಮತ್ತು ನನ್ನ ತಂದೆ ಮುಂಚೆ ಪ್ರತಿವಾದ ಪತ್ರ ಸಲ್ಲಿಸಿದ ಸಂಗತಿ ಗೊತ್ತಿದ್ದರೂ ಸಹ ಸದರಿ ಸಂಗತಿಯನ್ನು ನ್ಯಾಯಾಲಯದ ಮುಂದೆ ಮರೆಮಾಚಿ ಪುನಃ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಬಾರಿ ಪ್ರತಿವಾದ ಪತ್ರವನ್ನು ಸಲ್ಲಿಸಲು ನನ್ನ ತಂದೆ ಮಾಹಿತಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯನ್ನು ಪುಸಲಾಯಿಸಿ ನ್ಯಾಯಾಲಯಕ್ಕೆ ಕರೆದುಕೊಂಡು ನನಗೆ ಅನುಕೂಲವಾಗುವಂತೆ 2ನೇ ಬಾರಿಗೆ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

2 ನೇ ಬಾರಿಗೆ ಪ್ರತಿವಾದಪತ್ರವನ್ನು ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಸದೃಢವಾಗಿ ಇದ್ದರು ಎಂದು ತೋರಿಸಲು ವೈದ್ಯಕೀಯ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನಿಡಿ.172 ರಲ್ಲಿ ನನ್ನ ತಂದೆ ಕೆಲವು ಬೇನೆಗಳಿಂದ ಬಳಲುತ್ತಿದ್ದು ಎಂದು ಹೇಳಿದ್ದು, ಯಾವ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸಾಕ್ಷಿಯು ಅವರಿಗೆ ವಯಸ್ಸಾಗಿದ್ದು, ಸಣ್ಣ ಪುಟ್ಟ ಖಾಯಿಲೆಗಳು ಇದ್ದು,

ಹೇಳಿಕೊಳ್ಳುವಂತಹ ಯಾವುದೇ ದೊಡ್ಡ ಖಾಯಿಲೆ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ.172 ನ್ನು ತೋರಿಸಿ ಮೊದಲ ಹಾಗೂ 2ನೇ ಪುಟದಲ್ಲಿ ಬರೆದಿರುವ ಸಂಗತಿಗಳಿಗೂ ಹಾಗೂ ನನ್ನ ತಂದೆ ಮಾಡಿದ ಸಹಿಯ ಮದ್ಯೆ ಸಾಕಷ್ಟು ಬಹಳ ಅಂತರ ಇರುತ್ತದೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪುಟದಲ್ಲಿ ಬರೆದಿರುವ ಸಂಗತಿಗಳ ಕೊನೆಯಲ್ಲಿಯೇ ನನ್ನ ತಂದೆಯ ಸಹಿ ಇರುತ್ತದೆ ಎಂದರೆ ನಿಜ. ಅದೇ ರೀತಿ 5 ನೇ ಪುಟದಲ್ಲಿ ಸಹ ಬರೆದಿರುವ ಸಂಗತಿಗಳಿಗೂ ಹಾಗೂ ಸಾಕ್ಷಿದಾರರ ಸಹಿಗಳ ಮದ್ಯೆ ಸಾಕಷ್ಟು ಅಂತರ ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಸಾಕ್ಷಿದಾರರ ಸಹಿಗಳು ಹಾಗೂ ದಸ್ತುಬರಹಗಾರರ ಸಹಿಗಳ ಮದ್ಯೆ ಬಹಳ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಿಡಿ.172 ರಲ್ಲಿ ಹಕ್ಕು ಬಿಟ್ಟ ಪತ್ರದ ಬಗ್ಗೆ ಒಕ್ಕಣೆ ಇರುವುದಿಲ್ಲ ಎಂದರೆ ನಿಜ. ಅದೇ ರೀತಿ ಸ್ವತ್ತಿನ ಚಕ್ಕುಬಂದಿಯನ್ನು ಸಹ ನಮೂದಿಸಿಲ್ಲ ಎಂದರೆ ನಿಜ.

ಅದೇ ರೀತಿ ನಿಡಿ.172 ರಲ್ಲಿ ನನ್ನ ತಂದೆ ತನ್ನ 08 ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳಿಗೆ ಆಸ್ತಿಗಳನ್ನು ಈಗಾಗಲೇ ಹಂಚಿಕೆ ಮಾಡಿದ್ದು, ಸಿ.ಟಿ.ಎಸ್ ನಂಬರ 3226 ನೇದ್ದರ ಅರ್ಧ ಹಿಸ್ಸೆಯನ್ನು ನನಗೆ ಕೊಡುವ ಇಚ್ಛೆ ಹೊಂದಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸನ್ 2015 ರಲ್ಲಿ ಹಾಗೂ ಸನ್ 2016 ರಲ್ಲಿ ನಾನು ಹಾಗೂ ನನ್ನ ತಂದೆ ಸಲ್ಲಿಸಿದ ಪ್ರತಿವಾದ ಪತ್ರಗಳಲ್ಲಿ ದಿ.07.12.2010 ರಂದು ಸಿ.ಟಿ.ಎಸ್ ನಂಬರ 3226 ನೇದ್ದರ ಪೈಕಿ ಅರ್ಧ ಹಿಸ್ಸೆ ನೊಂದಾಯಿತ ಹಕ್ಕುಬಿಟ್ಟ ಪತ್ರ ನನ್ನ ಹೆಸರಿಗೆ ಮಾಡಿಕೊಟ್ಟ ಬಗ್ಗೆ ಹೇಳಿರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ದಾನಪತ್ರದ ಬಗ್ಗೆ ಹೇಳಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ದಿ.07.12.2010

ರಂದು ನೊಂದಾಯಿತ ಹಕ್ಕುಬಿಟ್ಟ ಪತ್ರ ಆಗಿರುವ ಸಂಗತಿ ನಿಜವೋ ಅಥವಾ ಸುಳ್ಳೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಹಕ್ಕುಬಿಟ್ಟ ಪತ್ರ, ದಾನಪತ್ರ ಮತ್ತು ಮೃತ್ಯುಪತ್ರ ಮಾಡುವ ಕಾಲಕ್ಕೆ ಸದರಿ ಮೇಲೆ ಹೇಳಿದ ಸಿ.ಟಿ.ಎಸ್ ನಂಬರ 3226 ಯಾರ ಹೆಸರಿಗೆ ದಾಖಲಿತ್ತು ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿಗೆ ದಾಖಲು ಇತ್ತು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಮಾಡುವ ಕಾಲಕ್ಕೆ ಸದರಿ ಆಸ್ತಿಯು ನನ್ನ ತಂದೆಯ ಹೆಸರಿಗೆ ದಾಖಲು ಇದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿಯು ಸಿಟಿಎಸ್ ಉತಾರೆಯನ್ನು ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಸದರಿ ಆಸ್ತಿಯು ನನ್ನ ತಂದೆಯ ಒಬ್ಬರ ಹೆಸರಿಗೆ ಮಾತ್ರ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರು ಮಾತ್ರ ಇದ್ದು, ಉಳಿದವರ ಹೆಸರು ಪೋಕಳ ಎಂಟ್ರಿ ಇರುತ್ತದೆ ಎಂದು ನುಡಿಯುತ್ತಾರೆ. ಯಾರ ಹೆಸರುಗಳು ಪೋಕಳ ಎಂಟ್ರಿ ಇರುತ್ತವೆ ಎಂದರೆ ಸಾಕ್ಷಿಯು ದಾಖಲೆಗಳಲ್ಲಿ ನಮೂದು ಇರುತ್ತದೆ ಅದನ್ನು ಹೇಳುವ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ರಾಮಚಂದ್ರ, ಲಕ್ಷ್ಮಣ, ವಿಠ್ಠಲ, ವಾದಿ ಕೋನಪ್ಪ, ಶಂಕರೆಪ್ಪ, ಹನಮಂತ, ಬಸವರಾಜ ಹಾಗೂ ಸುರೇಶ ಎಲ್ಲರೂ ನನ್ನ ಖಾಸಾ ಸಹೋದರರು ಇರುತ್ತಾರೆ. ಸದರಿ ಹನಮಂತ ಎನ್ನುವ ವ್ಯಕ್ತಿ ನಾನೇ ಇದ್ದು , ಸನ್ 1981 ರಲ್ಲಿ ನನ್ನ ಹೆಸರನ್ನು ಸುನೀಲ ಎಂದು ಬದಲಾಯಿಸಿಕೊಂಡಿರುತ್ತೇನೆ. ಸದರಿ ನನ್ನ ಹೆಸರನ್ನು ಬದಲಾಯಿಸಿಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಮೇಲೆ ಹೇಳಿದಂತೆ ನನ್ನ ತಂದೆಯ ಹೆಸರನ್ನು ಹೊರತುಪಡಿಸಿ ನನ್ನನ್ನು ಒಳಗೊಂಡಂತೆ ಎಲ್ಲರ ಹೆಸರುಗಳು ಪೋಕಳ ಎಂಟ್ರಿ ಇದ್ದವು ಎಂದರೆ ಸಾಕ್ಷಿಯು ನನ್ನ ಹೆಸರು ಪೋಕಳ ಎಂಟ್ರಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಅಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ನನ್ನ ತಂದೆಗೆ ಸದರಿ ಆಸ್ತಿಗೆ ಸಂಬಂಧಿಸಿದಂತೆ ಹಕ್ಕುಬಿಟ್ಟ

ಪತ್ರವನ್ನಾಗಲೀ , ದಾನಪತ್ರವನ್ನಾಗಲೀ, ಮೃತ್ಯುಪತ್ರವನ್ನಾಗಲೀ ಮಾಡಿಕೊಡುವ ಅಧಿಕಾರ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ನಾನು ಹೇಳುವಂತೆ ಯಾವುದೇ ಮೃತ್ಯುಪತ್ರವನ್ನು ಮಾಡಿಕೊಟ್ಟಿರುವುದಿಲ್ಲ, ಸದರಿ ದಾಖಲೆಯು ಸಂಶಯಾಸ್ಪದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರದಲ್ಲಿ ನಮೂದಿಸಿದ ಆಸ್ತಿಗೆ ಸಂಬಂಧಿಸಿದಂತೆ ನನಗ ಯಾವುದೇ ಹಕ್ಕು ಪ್ರಾಪ್ತಿಯಾಗಿರುವುದಿಲ್ಲ, ಸದರಿ ಆಸ್ತಿಯಲ್ಲಿ ನನಗೆ ಹಾಗೂ ನನ್ನ ಎಲ್ಲ ಸಹೋದರ-ಸಹೋದರಿಯರಿಗೆ ಸಮನಾದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಅವರೆಲ್ಲರ ಹಕ್ಕುಗಳನ್ನು ನಷ್ಟಗೊಳಿಸುವ ದುರುದ್ದೇಶದಿಂದ ಖೊಟ್ಟಿ ದಸ್ತಾವೇಜು ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನನ್ನ ಹೆಚ್ಚುವರಿ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ದಾಖಲೆಗಳನ್ನು ಮಾಡಿಕೊಡಲು ನಮ್ಮ ತಂದೆಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

Sd/-

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ